ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 16–11–2016

## ಪತ್ರಿಕಾ ಆಮಂತ್ರಣ

1. ಸಂತ ಶ್ರೇಷ್ಠ ಕನಕದಾಸರ ಜಯಂತಿ – 2016 ಮತ್ತು 'ಕನಕ ಶ್ರೀ' ಪ್ರಶಸ್ತಿ, 'ಕನಕ ಗೌರವ' ಹಾಗೂ 'ಕನಕ ಯುವ ಪುರಸ್ಕಾರ' ಪ್ರದಾನ ಸಮಾರಂಭ.

   ಉದ್ಘಾಟನೆ:

   ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

   ಮುಖ್ಯ ಅತಿಥಿಗಳು:

   ಅನಂತಕುಮಾರ್, ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

   ಅಧ್ಯಕ್ಷತೆ:

   ಆರ್. ವಿ. ದೇವರಾಜ್, ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.

   ದಿನಾಂಕ: 17–11–2016 ಗುರುವಾರ, ಬೆಳಿಗ್ಗೆ 11–30 ಗಂಟೆಗೆ.

   ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

   ಅಂದು ಬೆಳಿಗ್ಗೆ 10.00 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಬೆಳ್ಳಿರಥದಲ್ಲಿ ಭಾವಚಿತ್ರದೊಂದಿಗೆ ಹಾಗೂ ಜಾನಪದ ಕಲಾ ತಂಡಗಳ ಮೆರವಣಿಗೆ (ಗಾಂಧಿನಗರದ ಕನಕದಾಸ ವೃತ್ತದಿಂದ ರವೀಂದ್ರ ಕಲಾಕ್ಷೇತ್ರದವರೆಗೆ)

   ಬೆಳಿಗ್ಗೆ 10.00 ಗಂಟೆಗೆ 'ಕೇಳಿ ಕನಕನ್ ಪದಗಳ್' ಬೆಂಗಳೂರು ಮೃತ್ಯುಂಜಯ ದೊಡ್ಡವಾಡ ಮತ್ತು ತಂಡ, ಬೆಂಗಳೂರು ಇವರಿಂದ.

   ಮಧ್ಯಾಹ್ನ 2–00 ಗಂಟೆಗೆ ವ್ಯಾಸವರ್ಧನ ಟ್ರಸ್ಟ್ ಬೆಂಗಳೂರು ಅವರಿಂದ ಕನಕ ವೈಭವ ನೃತ್ಯರೂಪಕ

   ಸಂಜೆ 4.00 ಗಂಟೆಗೆ ನಂದನ ತಂಡ, ಬೆಂಗಳೂರು ಅವರಿಂದ ನಾಟಕ – " ಕಾಲ ಜ್ಞಾನಿ ಕನಕ "

2. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಮಾನ್ಯ ಮುಖ್ಯಮಂತ್ರಿಗಳಿಂದ ಇಲಾಖಾ ಚಟುವಟಿಕೆಗಳ ಪರಿಶೀಲನೆ
ಇ-ಆಫೀಸ್ ಹಾಗೂ ಸಾಮಾಜಿಕ ಜಾಲತಾಣ ಘಟಕದ ಉದ್ಘಾಟನೆ
ದಿನಾಂಕ: 18-11-2016 ಶುಕ್ರವಾರ
ಸಮಯ: ಸಂಜೆ 4:30ಕ್ಕೆ
ಸ್ಥಳ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೇಂದ್ರ ಕಚೇರಿ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು.

3. ಮಹಿಳೆ ಮತ್ತು ಮಕ್ಕಳ – ವರ್ತಮಾನದ ನೋಟ ವೃತ್ತಿ ರಂಗಭೂಮಿ ನಾಟಕೋತ್ಸವ
ಉದ್ಘಾಟನೆ:
ಶ್ರೀಮತಿ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರು.
<u>ಉಪಸ್ಥಿತಿ:</u>
ಅನಂತಕುಮಾರ್, ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಸಚಿವರು.
<u>ಅಧ್ಯಕ್ಷತೆ:</u>
ಆರ್. ವಿ. ದೇವರಾಜ್, ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.
ದಿನಾಂಕ: 18-11-2016 ಶುಕ್ರವಾರ, ಸಂಜೆ 6-00 ಗಂಟೆಗೆ.
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

## <u>ಪತ್ರಿಕಾ ಪ್ರಕಟಣೆ</u>

# <u>ಜೀವರಕ್ಷಣೆಗೆ ತುರ್ತು ಸೇವೆಯ ಪ್ರಥಮ ಪ್ರತಿಕ್ರಿಯೆ ಅತಿಮುಖ್ಯ :</u>

**<u>– ಸಚಿವ ರಮೇಶ್ ಕುಮಾರ್</u>**

ಬೆಂಗಳೂರು, ನ. 16: (ಕರ್ನಾಟಕ ವಾರ್ತೆ)

ನಮ್ಮ ಬೇಜವಾಬ್ದಾರಿಯಿಂದ ಮನುಷ್ಯನ ಜೀವ ಹೋಗಬಾರದು, ತುರ್ತು ಸೇವೆಯ ಪ್ರಥಮ ಪ್ರತಿಕ್ರಿಯೆ ಮುಖ್ಯ. ವ್ಯಕ್ತಿಯು ಯಾವುದೇ ರೀತಿಯ ಕಾಯಿಲೆ, ಅಪಘಾತ ಇತರೆ ಸನ್ನಿವೇಶದಲ್ಲಿ ಸಾವು ಬದುಕಿನ ನಡುವೆ ಹೋರಾಟದಲ್ಲಿರುವಾಗ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ನೀಡದಿದ್ದಲ್ಲಿ ಮರಣ ಪ್ರಮಾಣ ಹೆಚ್ಚಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ. ಆರ್. ರಮೇಶ್‌ಕುಮಾರ್ ತಿಳಿಸಿದರು.

ಇಂದು ವಿಕಾಸಸೌಧದ ಸಭಾಂಗಣದಲ್ಲಿ ಬೆಂಗಳೂರಿನ ಟೆಮಾಸೆಕ್ ಅಂತರಾಷ್ಟ್ರೀಯ ಪ್ರತಿಷ್ಠಾನ, ಸಿಂಗಾಪೂರ ಹೆಲ್ತ್ ಸರ್ವೀಸ್ ಹಾಗೂ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಸಹಯೋಗದಲ್ಲಿ ನಡೆದ ಆಸ್ಪತ್ರೆ ತುರ್ತು ಸೇವೆಯ ಪ್ರಥಮ ಪ್ರತಿಕ್ರಿಯೆ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಪೂರ್ವ ತುರ್ತು ಸೇವಾ ಕೌಶಲ್ಯ ತರಬೇತಿ ನೀಡಿ ಆರೋಗ್ಯ ಸೇವಾ ತಂಡಗಳ ಸಾಮರ್ಥ್ಯಗಳನ್ನು ವೃದ್ಧಿಸಿ ಬದುಕುಳಿಸುವ ಅವಕಾಶಗಳನ್ನು ಹೆಚ್ಚಿಸಿ ಅಸ್ವಸ್ಥತೆ, ಮರಣ ಹಾಗೂ ಅಂಗವಿಕಲತೆಯನ್ನು ತಡೆಯುವ ಉದ್ದೇಶ ನಮ್ಮ ಸರ್ಕಾರದ್ದಾಗಿದೆ ಎಂದರು.

ಮುಂದಿನ ಮೂರು ವರ್ಷಗಳಲ್ಲಿ ಸಿಂಗಾಪುರ ಜನರಲ್ ಆಸ್ಪತ್ರೆಯ ಬಹುಮುಖ ಪ್ರತಿಭೆಯ ವೈದ್ಯರು, ಶುಶ್ರೂಷಕರನ್ನೊಳಗೊಂಡ ತಂಡ ಕರ್ನಾಟಕ ವಿವಿಧ ಆಸ್ಪತ್ರೆಗಳ ಸುಮಾರು 300 ವಿವಿಧ ತಜ್ಞ ವೈದ್ಯರು ಹಾಗೂ ಶುಶ್ರೂಷಕಿಯರ ಆರೋಗ್ಯ ಸೇವಾ ತಂಡಗಳಿಗೆ ಸಂದಿಗ್ಧ ತುರ್ತು ಸೇವೆಗಳಾದ ಅಪಘಾತ, ಸುಟ್ಟಗಾಯ, ಹೃದಯಾಘಾತ, ಉಸಿರಾಟದ ತೊಂದರೆ, ಎದೆನೋವು ಹಾಗೂ ವಿಷ ಸೇವನೆಯ ತುರ್ತು ಸಂದರ್ಭಗಳನ್ನು ನಿಭಾಯಿಸಲು ಬೇಕಾದ ಜ್ಞಾನ ಕೌಶಲ್ಯಗಳ ತರಬೇತಿ ನೀಡುತ್ತಾರೆ. ಈ ತರಬೇತಿಯ ಕಾರ್ಯಕ್ರಮವು ಮೂರು ವರ್ಷಗಳ ಅವಧಿಯದಾಗಿದ್ದು, ತರಬೇತಿ ಕಾರ್ಯಾಗಾರ ಹಾಗೂ ಅಧ್ಯಯನ ಪ್ರವಾಸ, ಕರ್ನಾಟಕ ಹಾಗೂ ಸಿಂಗಾಪೂರದಲ್ಲಿ ಹಮ್ಮಿಕೊಂಡಿದ್ದು, ಅಂದಾಜು 1200 ಕ್ಕೂ ಹೆಚ್ಚು ಆರೋಗ್ಯ ಇಲಾಖೆ ಸಿಬ್ಬಂದಿ ಈ ತರಬೇತಿ ಪಡೆಯಲಿದ್ದಾರೆ ಎಂದರು.

ಅಂಕಿ – ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಸುಮಾರು ಶೇಕಡಾ 30 ರಿಂದ 35 ರಷ್ಟು ತುರ್ತುಸ್ಥಿತಿಗಳು ಅಪಘಾತ, ಹೃದಯಘಾತ, ಉಸಿರಾಟದ ತೊಂದರೆ, ಎದೆನೋವು, ವಿಷ ಸೇವನೆ ಹಾಗೂ ಸುಟ್ಟಗಾಯಗಳಿಗೆ ಸಂಬಂಧಪಟ್ಟಿರುತ್ತವೆ, ಇವರಿಗೆ ಪ್ರಥಮ ಚಿಕಿತ್ಸೆ ಬಹಳ ಮುಖ್ಯ. ಅಂತೆಯೇ ವಿಶ್ವಾಸಾರ್ಹ ಹಾಗೂ ಸುಸ್ಥಿರವಾದ ಉತ್ತಮ ಆರೋಗ್ಯ ಸೇವೆ ವ್ಯವಸ್ಥೆಗಳನ್ನು ನಮ್ಮ ನಾಗರಿಕರಿಗೆ ಕಲ್ಪಿಸಲಾಗುವುದು ಎಂದರು.

ಈ ಕಾರ್ಯಾಗಾರದಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕೇಂದ್ರ ಸರ್ಕಾರದ ಸಂಸದೀಯ ಕಾರ್ಯದರ್ಶಿ ಡಾ. ಉಮೇಶ್ ಜಾಧವ್ ಹಾಗೂ

ಬೆಂಗಳೂರಿನ ಟೆಮಾಸೆಕ್ ಅಂತರಾಷ್ಟ್ರೀಯ ಪ್ರತಿಷ್ಠಾನ, ಸಿಂಗಾಪೂರ ಹೆಲ್ತ್ ಸರ್ವೀಸ್ ಹಾಗೂ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಸೇರಿದಂತೆ  ಕರ್ನಾಟಕದ ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್.ಎಂ/ಕೆಎನ್ವಿ:ಜಿಪಿಆರ್.

## ಸ್ಪರ್ಧಾತ್ಮಕ ಪರೀಕ್ಷೆ – ಕೀ ಉತ್ತರ ಪ್ರಕಟ

ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಗ್ರೂಪ್ 'ಸಿ' ತಾಂತ್ರಿಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತಗೆ ಒಟ್ಟು 21407 ಅಭ್ಯರ್ಥಿಗಳಿಗೆ ಸಾಮಾನ್ಯ ಪತ್ರಿಕೆ ಮತ್ತು ನಿರ್ದಿಷ್ಟ ಪತ್ರಿಕೆಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ನವೆಂಬರ್ 13 ರಂದು ಬೆಂಗಳೂರು, ಬೆಳಗಾವಿ, ಕಲಬುರಗಿ, ಶಿವಮೊಗ್ಗ ಮತ್ತು ಮೈಸೂರು ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಸಲಾಗಿರುತ್ತದೆ. ಪರೀಕ್ಷೆಯ ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲದಲ್ಲಿ "http://kpsc.kar.nic.in/Key Answers" ನಲ್ಲಿ ಪ್ರಕಟಿಸಿದೆ.

ಈ ಕೀ ಉತ್ತರಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಅದನ್ನು ಪುಷ್ಟೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ವಿಷಯ, ಪ್ರಶ್ನೆ ಪುಸ್ತಿಕೆಯ ಶ್ರೇಣಿ, ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳು ಹಾಗೂ ಪ್ರತಿ ಪ್ರಶ್ನೆಗೆ ರೂ 50/– ಶುಲ್ಕದೊಂದಿಗೆ (ಐಪಿಒ/ಡಿಡಿ ಮೂಲಕ) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು  – 560 001 ಇವರಿಗೆ ದಿನಾಂಕ: 20–11–2016 ರ ಒಳಗಾಗಿ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.  ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್ಎಂ:ಜೆಡಿ:ಜಿಪಿಆರ್.

## ಹಂದಿ ಸಾಕಾಣಿಕೆ ತರಬೇತಿ

ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ಹಂದಿ ತಳಿ ಸಂವರ್ಧನಾ ಕ್ಷೇತ್ರ, ಹೆಸರಘಟ್ಟ, ಇಲ್ಲಿ ನವೆಂಬರ್ 28 ರಿಂದ ಡಿಸೆಂಬರ್ 3 ರವರೆಗೆ ಹಂದಿ ಸಾಕಾಣಿಕೆ ಕುರಿತು ಆಸಕ್ತಿಯುಳ್ಳ ರೈತರಿಗೆ, ರೈತ ಮಹಿಳೆಯರಿಗೆ

ಮತ್ತು ನಿರುದ್ಯೋಗ ಯುವಕ/ಯುವತಿಯರಿಗೆ ಆರು ದಿನಗಳ "ಹಂದಿ ಸಾಕಾಣಿಕೆ' ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ ತರಬೇತಿ ಅವಧಿಯಲ್ಲಿ ಉಪಾಹಾರ ಮತ್ತು ಊಟದ ವ್ಯವಸ್ಥೆ ಮಾಡಲಾಗಿದ್ದು, ಪ್ರಯಾಣ ವೆಚ್ಚವನ್ನು ಅಭ್ಯರ್ಥಿಗಳೇ ಭರಸಬೇಕು. ತರಬೇತಿ ಅವಧಿಯಲ್ಲಿ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಳ್ಳಲು ಇಚ್ಛಿಸಿದರೆ ಒಂದು ದಿನಕ್ಕೆ ರೂ 25 ರಂತೆ ವಸತಿ ಶುಲ್ಕ ಪಾವತಿಸಬೇಕು. ತರಬೇತಿ ಪಡೆಯಲು ಇಚ್ಛಿಸುವವರು ವಾಸಸ್ಥಳದ ದೃಢೀಕರಣಪ್ರತಿ. ಮತ್ತು ಇತ್ತೀಚಿನ 2 ಪಾಸ್‌ಫೋರ್ಟ್‌ಅಳತೆಯ ಭಾವಚಿತ್ರಗಳು ಹಾಗೂ ಸಂಬಂಧಪಟ್ಟ ಸ್ಥಳೀಯ ಪಶುವೈದ್ಯರ ಶಿಫಾರಸ್ಸು ಪತ್ರದೊಂದಿಗೆ ನವೆಂಬರ್ 28 ರ ಬೆಳಿಗ್ಗೆ 9.30 ಗಂಟೆಗೆ ನೇರವಾಗಿ ತರಬೇತಿಗೆ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಕ್ಷೇತ್ರಕ್ಕೆ ನೇರವಾಗಿ ಭೇಟಿ ನೀಡಿ ಅಥವಾ ದೂರವಾಣಿ 080 – 28466456 ಮುಖಾಂತರ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ. ಕ್ಷೇತ್ರದಲ್ಲಿ ಸುಮಾರು 40 ರಿಂದ 50 ಜನರಿಗೆ ತರಬೇತಿ ನೀಡಲು ಅವಕಾಶವಿದ್ದು, ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## "ನೋಂದಾಯಿತ ಪದವೀಧರರಾಗಿ' ನೋಂದಣಿ ಮಾಡಿಸಲು ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದು 5 ವರ್ಷ ಪೂರೈಸಿದ ಪದವೀಧರರಿಂದ "ನೋಂದಾಯಿತ ಪದವೀಧರರಾಗಿ" ನೋಂದಣಿ ಮಾಡಿಸಲು ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿಗಳನ್ನು ಡಿಸೆಂಬರ್ 1 ರಿಂದ 31 ರವರೆಗೆ ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪಡೆದು ಸಲ್ಲಿಸಬೇಕು. ಭರ್ತಿಮಾಡಿದ ಅರ್ಜಿಗಳ ಜೊತೆಗೆ ರೂ. 500/– ಡಿ.ಡಿ. ಯನ್ನು ಲಗತ್ತಿಸಿ ಡಿಸೆಂಬರ್ 31 ರೊಳಗೆ ಕುಲಸಚಿವರ ಕಚೇರಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಬೇಕು. ( ಕಚೇರಿ ಅವಧಿ : – ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9–00 ರಿಂದ ಸಂಜೆ 3–45 ಗಂಟೆ, ಶನಿವಾರ ಬೆಳಿಗ್ಗೆ 9–00 ರಿಂದ 12.00 ಗಂಟೆವರೆಗೆ ಮಾತ್ರ).

ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು (Comptroller, UAS, Bangalore) ಇವರ ಹೆಸರಿಗೆ ಪಡೆದು, ಡಿಸೆಂಬರ್ 1 ರಿಂದ 31 ರೊಳಗೆ ಖರೀದಿ ಮಾಡಿದ ಡಿ.ಡಿ.ಯನ್ನು ಮಾತ್ರ ಸಲ್ಲಿಸಬೇಕು. ಡಿಸೆಂಬರ್ 31 ರ ನಂತರ ತಡವಾಗಿ ಬರುವ ಅರ್ಜಿಗಳು /ಅಪೂರ್ಣ ಹಾಗೂ ನಿಗದಿತ ಶುಲ್ಕ ಭರಿಸದಿದ್ದರೆ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಕುಲಸಚಿವರ ಕಚೇರಿಯ ದೂರವಾಣಿ ಸಂಖ್ಯೆ 080 – 23330984/23330149 ಸಂಪರ್ಕಿಸಿ ಅಥವಾ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu.in ಅನ್ನು ವೀಕ್ಷಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಕುಡಿಯುವ ನೀರು ಯೋಜನೆಗಳು : ಪಾರದರ್ಶಕ ಕಾಯ್ದೆಗೆ ವಿನಾಯಿತಿ

**– ಸಚಿವ ಈಶ್ವರ ಬಿ. ಖಂಡ್ರೆ**

ಬೆಂಗಳೂರು, ನವೆಂಬರ್ 16(ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಬರಪರಿಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದರಿಂದ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶನ ಅಧಿನಿಯಮ ಕಾಯ್ದೆಗೆ ವಿನಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಪೌರಾಡಳಿತ ಸಚಿವ ಈಶ್ವರ ಬಿ. ಖಂಡ್ರೆ ಅವರು ತಿಳಿಸಿದರು.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಇಂದು ಸುದ್ಧಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವರು ನಗರ ಸ್ಥಳೀಯ ಸಂಸ್ಥೆಗಳಲ್ಲಿ 200 ರಿಂದ 250 ಕೋಟಿ ರೂ. ಹಣ ಇದ್ದು, ಈ ಹಣ ಬಳಸಿಕೊಂಡು ಆದ್ಯತೆ ಮೇಲೆ ಕುಡಿಯುವ ನೀರು ಸರಬರಾಜು ಮಾಡುವಂತೆ ಆದೇಶಿಸಲಾಗಿದೆ ಎಂದರು.

ಕೇಂದ್ರ ಸರ್ಕಾರದ ಅಮೃತ ಯೋಜನೆ ಹೊರತುಪಡಿಸಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿಗೆ ಆದ್ಯತೆ ನೀಡಲು ಜಿಲ್ಲಾಡಳಿತಕ್ಕೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದ ಸಚಿವರು ಮುಂದಿನ ಜೂನ್ ತಿಂಗಳ ಅಂತ್ಯದವರೆಗೆ ಸಮರ್ಪಕವಾಗಿ ನೀರು ಸರಬರಾಜು

ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ಹೆಚ್ಚುವರಿಯಾಗಿ 200 ಕೋಟಿ ರೂ. ಹಣದ ಅಗತ್ಯತೆ ಇದೆ ಎಂದು ಅಂದಾಜು ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಸ್ಥಳೀಯ ನಗರ ಸಂಸ್ಥೆಗಳಿಗೆ ನೀರು ಪೂರೈಕೆಗೆ ಸಂಬಂಧಿಸಿದಂತೆ ಈಗಾಗಲೇ ಹಣ ಬಿಡುಗಡೆ ಮಾಡಲಾಗಿದ್ದು ಕುಡಿಯುವ ನೀರು ಸರಬರಾಜಿಗೆ ಬಳಸುವಂತೆ ಆದೇಶಿಸಲಾಗಿದೆ ಎಂದು ಸಚಿವರು ಬರದ ಹಿನ್ನೆಲೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಕೊರತೆ ಎದುರಾಗುವ ಅಪಾಯವನ್ನು ಮನಗಂಡು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆ ಸುಗಮಗೊಳಿಸಲು ಇಲಾಖೆ ಸಜ್ಜುಗೊಂಡಿದೆ ಎಂದು ಪೌರಾಡಳಿತ ಸಚಿವ ಈಶ್ವರ್ ಬಿ. ಖಂಡ್ರೆ ಅವರು ತಿಳಿಸಿದರು.

ಎಸ್‌ಎಂ:ಕೆಪಿಪಿ:ಜಿಪಿಆರ್.

## ಮಾಲಿನ್ಯ ತಪಾಸಣೆ ಸಂಚಾರಿ ವಾಹನಗಳಿಗೆ ಮುಖ್ಯಮಂತ್ರಿಗಳಿಂದ ಚಾಲನೆ

ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ವಾಹನಗಳಿಂದಾಗುವ ವಾಯುಮಾಲಿನ್ಯ ತಪಾಸಣೆ ಮಾಡುವ ನೂತನ ಸಂಚಾರಿ ಮಾಪನ ವಾಹನಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಹಸಿರು ನಿಶಾನೆ ತೋರಿಸಿದರು.

ವಿಧಾನಸೌಧದ ಮುಂಭಾಗದಲ್ಲಿ ಇಂದು ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 12 ನೂತನ ವಾಹನಗಳಿಗೆ ಮುಖ್ಯಮಂತ್ರಿ ಅವರು ಚಾಲನೆ ನೀಡಿದರು.

ಸಂಚಾರಿ ಮಾಲಿನ್ಯ ಮಾಪನ ಉಪಕರಣಗಳನ್ನೊಳಗೊಂಡ 12 ವಾಹನಗಳಲ್ಲಿ 8 ವಾಹನಗಳು ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸಲಿದ್ದು ಉಳಿದ ನಾಲ್ಕು ವಾಹನಗಳು ಮೈಸೂರು, ಮಂಗಳೂರು, ಧಾರವಾಡ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಲಿವೆ.

ಅರಣ್ಯ ಸಚಿವ ಬಿ. ರಮಾನಾಥ ರೈ, ಬೆಂಗಳೂರು ನಗರ ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಲಕ್ಷ್ಮಣ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್‌ಎಂ:ಕೆಪಿಪಿ:ಜಿಪಿಆರ್.

## ರಾಜ್ಯದ ತಲಾ ಆದಾಯದಲ್ಲಿ ಹೆಚ್ಚಳ : ಎಂ.ಆರ್. ಸೀತಾರಾಂ

ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಭೀಕರ ಬರಗಾಲ ಇದ್ದರೂ ತಲಾ ಆದಾಯದಲ್ಲಿ ಹೆಚ್ಚಳವಾಗಿದೆ ಎಂದು ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಂ ಅವರು ತಿಳಿಸಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಇಂದು ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಸಚಿವರು ಕಳೆದ ಸಾಲಿಗಿಂತ ಈ ಬಾರಿ ಶೇ 11.4 ರಷ್ಟು ತಲಾ ಆದಾಯ ಹೆಚ್ಚಳವಾಗಿದ್ದು ರಾಷ್ಟ್ರದ ತಲಾ ಆದಾಯಕ್ಕೆ ಹೋಲಿಸಿದಲ್ಲಿ ರಾಜ್ಯದ ತಲಾ ಆದಾಯದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠನವಾಗಬೇಕಾಗಿರುವ ಹಿನ್ನೆಲೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಕೆ.ಡಿ.ಪಿ. ಮಾದರಿಯಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಸ್ಥಳೀಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಸಬೇಕಾಗಿದೆ ಎಂದು ಮಾತನಾಡಿದ ಅವರು ನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ ಆಗುತ್ತಿಲ್ಲ ಎಂಬ ದೂರಿನ ಹಿನ್ನೆಲೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ನಡೆಸಬೇಕು ಎಂದರು.

ಶಾಸಕರ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಕುರಿತಂತೆ ಅಪರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮೇಲ್ವಿಚಾರಣೆ ನಡೆಸಲು ಪ್ರಾದೇಶಿಕ ಆಯುಕ್ತರಿಗೆ ಸೂಚಿಸಲಾಗಿದೆ ಎಂದ ಸಚಿವರು ಸುಮಾರು 12 ಕೋಟಿ ರೂ. ವೆಚ್ಚದಲ್ಲಿ ಜವಾಹರಲಾಲ್ ನೆಹರು ತಾರಾಲಯವನ್ನು ಆಧುನೀಕರಣಗೊಳಿಸಲಾಗುವುದು ಎಂದು ತಿಳಿಸಿದರು.

ಪ್ರತಿ ಜಿಲ್ಲೆಗೊಂಡು ವಿಜ್ಞಾನ ಕೇಂದ್ರವನ್ನು ಆರಂಭಿಸಲು ಸರ್ಕಾರ ಪರಿಶೀಲಿಸುತ್ತಿದೆ. ಧಾರವಾಡದಲ್ಲಿ 22 ಕೋಟಿ ರೂ. ವೆಚ್ಚದಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರ, 3 ಡಿ ಡಿಜಿಟಲ್ ತಾರಾಲಯ ಸ್ಥಾಪನೆ ಕಾಮಗಾರಿ ಪ್ರಗತಿಯಲ್ಲಿದೆ ಎಂದ ಸಚಿವ ಸೀತಾರಾಂ ಅವರು ನೂರು ಪ್ರೌಢಸಾಲಾ ವಿಜ್ಞಾನ ಶಿಕ್ಷಕರಿಗೆ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ 10 ದಿನಗಳ ತರಬೇತಿ

ಕಾರ್ಯ ಆರಂಭಿಸಲಾಗಿದ್ದು ಈಗಾಗಲೇ 3600 ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ ಎಂದರು.

ಮಡಿಕೇರಿಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಆರಂಭಿಸಲು ಸುಮಾರು 1.30 ಕೋಟಿ ರೂ ಬಿಡುಗಡೆ ಮಾಡಲಾಗಿದೆ ಎಂದ ಸಚಿವರು ಕೊಡಗಿನ ಹೆಮ್ಮೆಯ ಪುತ್ರ ಜನರಲ್ ಕೆ.ಎಸ್. ತಿಮ್ಮಯ್ಯ ಸ್ಮಾರಕ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು ಮುಂದಿನ ವರ್ಷ ಈ ಕೇಂದ್ರವನ್ನು ಆರಂಭಿಸಲು ಉದ್ದೇಶಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಎಸ್‌ಎಂ:ಕೆಪಿಪಿ:ಜಿಪಿಆರ್.

## ದೇಶಿ ತಳಿ ಜಾನುವಾರು ಸಂವರ್ಧನೆಗೆ ಕೇಂದ್ರದಿಂದ 24.5 ಕೋಟಿ ರೂ.

ಬೆಂಗಳೂರು, ನವೆಂಬರ್ 16(ಕರ್ನಾಟಕ ವಾರ್ತೆ)

ದೇಶೀಯ ಜಾನುವಾರುಗಳು ಇತರ ಪ್ರಾಣಿಗಳ ಸಂರಕ್ಷಣೆಗೆ ಕೇಂದ್ರ ಸರ್ಕಾರ ಮುಂದಾಗಿದ್ದು, ಈ ಯೋಜನೆಗೆ 24.56 ಕೋಟಿ ರೂ. ಗಳ ಅನುದಾನವನ್ನು ಮಂಜೂರು ಮಾಡಿದೆ ಎಂದು ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎಸ್. ಆರ್. ಉಮಾಶಂಕರ್ ತಿಳಿಸಿದರು.

ಅವರು ಇಂದು ಹೆಬ್ಬಾಳದ ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನಲ್ಲಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಎನ್‌ಎಎಫ್‌ಸಿಸಿ ಯೋಜನೆಯನ್ವಯ "ಹವಾಮಾನ ಬದಲಾವಣೆ ಹಿನ್ನೆಲೆಯಲ್ಲಿ ರಾಜ್ಯದ ದೇಶೀಯ ಜಾನುವಾರುಗಳ ಸಂರಕ್ಷಣೆ ಮತ್ತು ನಿರ್ವಹಣೆ" ಉಪಕ್ರಮ ಕಾರ್ಯಾಗಾರದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಈ ಯೋಜನೆಯಡಿ ದೇಶೀಯ ತಳಿ ದನಗಳಾದ ಹಳ್ಳಿಕಾರ್, ಮಲೆನಾಡು ಗಿಡ್ಡ ಮುಂತಾದ ತಳಿಗಳ ಉತ್ಪಾದಕತೆ ಗುರುತಿಸಿ ವ್ಯವಸ್ಥಿತವಾಗಿ ತಳಿ ಸಂವರ್ಧನೆಯನ್ನು ಕೈಗೊಳ್ಳಲಾಗುವುದು. ಇದರೊಂದಿಗೆ ನಮ್ಮ ರಾಜ್ಯದ ದೇಶಿ ತಳಿ ಕುರಿಗಳಾದ ಬನ್ನೂರು, ಡೆಕ್ಕನಿ, ಬಳ್ಳಾರಿ ಕುರಿ ತಳಿಗಳನ್ನು ಸಹ ಸಂವರ್ಧನೆಯಲ್ಲಿ ಅಭಿವೃದ್ಧಿಪಡಿಸಲಾಗುವುದು

ರಾಜ್ಯ ಸರ್ಕಾರವು ದೇಶಿ ತಳಿ ಕುರಿಗಳ ಘನೀಕೃತ ವೀರ್ಯ ಕೇಂದ್ರವನ್ನು ಪ್ರಾರಂಭಿಸಲು 3 ಕೋಟಿ ರೂ ಅನುದಾನವನ್ನು ಮಂಜೂರು ಮಾಡಿದೆ.  ಕುರಿ ಮತ್ತು ಮೇಕೆಗಳಲ್ಲಿ ಕೃತಕ ಗರ್ಭಧಾರಣೆ ಮಾಡುವುದರಿಂದ ರೈತರಿಗೆ ಕುರಿ ಮಾರಾಟದಲ್ಲಿ ಹೆಚ್ಚು ಆದಾಯ ಬರಲಿದೆ.  ನಮ್ಮಲ್ಲಿ ಮಾನವ ಸಂಪನ್ಮೂಲ ಸಹ ಇದ್ದು ನಬಾರ್ಡ್, ಎಫ್ರೀ ಮುಂತಾದ ಸಂಸ್ಥೆಗಳ ಸಹಭಾಗಿತ್ವದಿಂದ ಈ ಯೋಜನೆ ಯಶಸ್ವಿಯಾಗುತ್ತದೆ ಎಂದರು.

ಕಳೆದ ಐದು ದಶಕಗಳಲ್ಲಿ ಭೂಮಿಯನ್ನು ಮನುಷ್ಯ ಸಾಕಷ್ಟು ಹಾಳುಮಾಡಿ ಈಗಿನ ಹವಾಮಾನ ಬದಲಾವಣೆಗೆ ಕಾರಣವಾಗಿದ್ದಾನೆ, ಭೂಮಿಯಲ್ಲಿ ಮಾಲಿನ್ಯ, ಬರಗಾಲ, ಜನಸಂಖ್ಯೆ ಹೆಚ್ಚಳದಿಂದ ಸಾಕಷ್ಟು ತೊಂದರೆಯುಂಟಾಗಿದೆ. ವಿವಿಧ ತಳಿಗಳ ಪ್ರಾಣಿಗಳು, ಪಕ್ಷಿಗಳು ನಶಿಸಿಹೋಗುತ್ತಿವೆ.  ಮನುಷ್ಯ ತನ್ನ ಸ್ವಾರ್ಥದಿಂದ ಭೂಮಿಯನ್ನು ದುರ್ಬಳಕೆ ಮಾಡಿಕೊಂಡರೆ, ಭೂಮಿಗೂ ಮುಂದೆ ಉಳಿಗಾಲವಿಲ್ಲದಂತಾಗುತ್ತದೆ.

ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆಯ ನಿರ್ದೇಶಕ ಡಾ. ಕೆ.ಎಂ. ಮಹಮ್ಮದ್ ಜಫರುಲ್ಲಾ ಖಾನ್ ಮಾತನಾಡಿ ಹವಾಮಾನ ಬದಲಾವಣೆಯಿಂದ ಪ್ರಾಣಿ ಹಾಗೂ ಪಕ್ಷಿ ತಳಿಗಳಿಗೆ ಬಹಳ ತೊಂದರೆಯಾಗಿದೆ.  ಭೂಕಂಪನ, ಸುನಾಮಿ  ಜನರನ್ನು ಕಾಡುತ್ತಿದೆ. ನಾವು ಹಸಿರು ಸಂರಕ್ಷಿಸಿ ಸಾಕುಪ್ರಾಣಿಗಳ ತಳಿಗಳನ್ನು ವೃದ್ಧಿಗೊಳಿಸಬೇಕು ಎಂದರು.

ಕೇಂದ್ರ ಸರ್ಕಾರದ ಎನ್‌ಎಫ್‌ಸಿಸಿ ಯೋಜನೆಯಿಂದ ಜಾನುವಾರುಗಳಿಗೆ ಬಹಳ ಪ್ರಯೋಜನವಾಗಲಿವೆ, ವಾತಾವರಣ ಬದಲಾವಣೆಯಿಂದ ಜಾನುವಾರುಗಳ ಆರೋಗ್ಯದಲ್ಲಿ ಏರುಪೇರು ಉಂಟಾಗುವುದಲ್ಲದೆ ಕೀಟಗಳ ಸಂತತಿ ಬೆಳೆದು ಸಾಂಕ್ರಾಮಿಕ ರೋಗಗಳ ಹಾವಳಿ ಹೆಚ್ಚುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಎಂ.ಐ. ಗಾಣಗಿ, ಎಫ್ರೀ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ತಾ. ಶಾಶ್ವತಿ ಮಿಶ್ರಾ, ಕರ್ನಾಟಕ ರಾಜ್ಯ ಉಣ್ಣೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವರಾಂ, ಸಂಪನ್ಮೂಲ ವ್ಯಕ್ತಿಗಳಾದ ಜಿ.ಎಸ್. ನವೀನ್ ಕುಮಾರ್, ವಿವೇಕ್ ಪಾಟೀಲ್, ಕೆ.ಪಿ. ರಮೇಶ್ ಮುಂತಾದವರು ಉಪಸ್ಥಿತರಿದ್ದರು.

ಎಸ್ ಎಂ/ಕೆ.ಎನ್.ಕೆ:ಜಿಪಿಆರ್.

# ಶುಲ್ಕ ಪಾವತಿಸಲು ಕಾಲಾವಕಾಶ

ಬೆಂಗಳೂರು, ನವೆಂಬರ್ 16 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು (ಗ್ರೂಪ್ – ಎ) ಮತ್ತು ಲೆಕ್ಕಪರಿಶೋಧನಾಧಿಕಾರಿ (ಗ್ರೂಪ್ –ಬಿ) ವೃಂದದ 162 ಹುದ್ದೆಗಳ ಮುಖ್ಯ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನವೆಂಬರ್ 18 ರವರೆಗೆ ಹಾಗೂ ಕರ್ನಾಟಕ ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಮೂಹ 'ಎ' ವೃಂದದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಒಟ್ಟು 25 ಹುದ್ದೆಗಳ ಮುಖ್ಯ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನವೆಂಬರ್ 16 ರವರೆಗೆ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿತ್ತು.

ಪ್ರಸ್ತುತ ಅಂಚೆ ಕಚೇರಿಗಳಲ್ಲಿ ಶುಲ್ಕ ಪಾವತಿಸಲು ಅಭ್ಯರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ, ಅಭ್ಯರ್ಥಿಗಳಿಗೆ ಮೇಲಿನ ಎರಡು ಪರೀಕ್ಷೆಗಳಿಗೂ ಶುಲ್ಕ ಪಾವತಿಸಲು ನವೆಂಬರ್ 24 ರವರೆಗೆ ಕಾಲಾವಕಾಶವನ್ನು ನೀಡಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# DATE EXTENDED

Bengaluru, November 16th (Karnataka Information)

The KPSC Commission had given time till 18-11-2016 for fee payment for the candidates selected for the Main Examinations for total 162 Post of Assistant Controller (Group-A) and Audit Officer (Group-B) in the Karnataka State Audit and Accounts Departments and till 16-11-2016 for candidates selected for the Main Examinations for total 25 posts of Assistant Conservator of Forestes in Karnataka State Forest, Ecology and Environment Department.

As candidates are facing difficulties in paying fees in post offices, only the date to pay the fees for both the above mentioned Examinations has been extended till 24-11-2016.

sm/gpr.